ದಿನಾಂಕ 26/09/2016 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.

2ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್‌ಪಿ ವಕೀಲರಿಂದ ಪಾಟೀ ಸವಾಲುಃ

ನಾವು 3 ಜನ ಅಣ್ಣತಮ್ಮಂದಿರು. ನಾವು ಯಾವ ಇಸವಿಯಲ್ಲಿ ವಿಭಾಗ ಆಗಿದ್ದೇವೆ ಎಂದು ಗೊತ್ತಿಲ್ಲ. ಅಂದಾಜು 25 ವರ್ಷದ ಹಿಂದೆ ನಾವು ವಿಭಾಗ ಆಗಿದ್ದೇವೆ. ವಿಭಾಗ ಆಗುವ ಸಮಯದಲ್ಲಿ ಚನ್ನೇಗೌಡರು, ಚಲುವೇಗೌಡರು, ನನ್ನ ಮಾವ ಮರೀಗೌಡರು, ಸಣ್ಣಬಸವೇಗೌಡರು, ಪಟೇಲ್‌ಮಳಿಗೇಗೌಡರು ಸೇರಿದ್ದರು. ವಿಭಾಗದ ಆದ ಮೇಲೆ ವಿಭಾಗದ ಪತ್ರವನ್ನು ನಿಮ್ಮ ಬಳಿ ಇಟ್ಟುಕೊಂಡಿದ್ದೀರಿ ಎಂದರೆ ಸರಿಯಲ್ಲ. ಜರಾಕ್ಸ್ ಪಾಲುಪಟ್ಟಿಯನ್ನು ಸಾಕ್ಷಿಗೆ ತೋರಿಸಲಾಗಿ

ಅದರಲ್ಲಿರು ಸಹಿಯನ್ನು ಸಾಕ್ಷಿ ಗುರುತಿಸಿರುತ್ತಾರೆ. ಅದು ಜರಾಕ್ಸ್ ಆಗಿದ್ದರಿಂದ ನಿಶಾನೆ ಗೊಳಿಸಲಾಗಲಿಲ್ಲ. ನೀವು ಹಾಜರಿಸಿದ ಜರಾಕ್ಸ್ ಪಾಲುಪಟ್ಟಿಗೆ ಹಾಗೂ ನಾನು ತೋರಿಸಿದ ಜರಾಕ್ಸ್ ಪಾಲುಪಟ್ಟಿ ವ್ಯೆತ್ಯಾಸ ಇದೆ ಎಂದರೆ ಸರಿಯಲ್ಲ. ನಿಮ್ಮ ಹಿಸ್ಸೆಯನ್ನ ನಿಮ್ಮ ಪತ್ರದಲ್ಲಿ ತಿದ್ದಿ ಬರೆದಿದ್ದಾರೆ ಎಂದರೆ ಸರಿಯಲ್ಲ. ನಾವು 25 ವರ್ಷದಿಂದ ಪ್ರತ್ಯೇಕವಾಗಿ ಬೇರೆ ಬೇರೆ ವಾಸಮಾಡುತ್ತಿದ್ದೇವೆ. ನೀವು ಮನೆಗಳನ್ನು ಹಿಸ್ಸೆ ಮಾಡಿಕೊಂಡಿಲ್ಲ ಎಂದರೆ ಸರಿ. ಆಗ ಒಟ್ಟಿಗೆ ಬಿಟ್ಟಿದ್ದರು ಎಂದು ಹೇಳುತ್ತಾರೆ. ನಿಮಗೆ ಆ ಕಾಲಕ್ಕೆ ನಿಮ್ಮ ತಂದೆ ಕಟ್ಟಿದ ಮನೆ ಮತ್ತು ಕೃಷ್ಣೇಗೌಡ ಹಾಗೂ ನಾನು ಸೇರಿ ಕಟ್ಟಿದ ಮನೆ ಇತ್ತು ಎಂದರೆ ಸರಿ. ಈಗ ನೀವಿರುವ ಮನೆಯನ್ನ ನೀವು ಮತ್ತು ರಾಮಚಂದ್ರ ವಿಭಾಗ ಮಾಡಿಕೊಂಡಿದ್ದೀರಿ ಎಂದರೆ ಸರಿ. ನಿಮ್ಮ ತಂದೆಯಿಂದ ಬಂದಂತ ಮನೆಯನ್ನ ಕೃಷ್ಣೇಗೌಡರಿಗೆ ಕೊಟ್ಟಿದ್ದರು, ನಂತರ ಅವರು ಶಿವೇಗೌಡ ಬಿನ್ ನಿಂಗೇಗೌಡರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಹಳೇ ಮನೆಯಾಗಿದ್ದರಿಂದ ನಿವೇಶನವನ್ನು ಕೊಟ್ಟಿದ್ದರು ಎಂದರೆ ಸರಿ. ಸದರಿ ನಿವೇಶನದಲ್ಲಿ ಮನೆಯನ್ನ ಕಟ್ಟಿದ್ದಾರೆ ಎಂದರೆ ಒಟ್ಟಿಗೆ ಕಟ್ಟಿದ್ದೇವೆ ಎಂದು ಹೇಳುತ್ತಾರೆ. 2ನೇ ಪ್ರತಿವಾದಿ ಮಾತ್ರ ಮನೆಯನ್ನ ಕಟ್ಟಿದ್ದಾರೆ, ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹಿಸ್ಸೆ ಆದಾಗಿನಿಂದ ಹಿಸ್ಸೆಗೆ ಬಂದಂತ ಆಸ್ತಿಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅನುಭವಿಸಿಕೊಂಡು ಬರುತ್ತಿದ್ದೀರಿ ಎಂದರೆ ಸರಿ. ಅದೇ ರೀತಿ ಖಾತೆ ಪಹಣಿ ಮಾಡಿಕೊಂಡಿದ್ದೀರಿ ಎಂದರೆ ಸ್ವಲ್ಪ ದಿನ ಆದ ಮೇಲೆ ಖಾತೆ ಪಹಣಿ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ನಿಮ್ಮ ಅಣ್ಣನ ಮಕ್ಕಳು ಆಸ್ತಿಯನ್ನ ಡೆವಲಪ್ ಮಾಡುತ್ತಿರುವುದರಿಂದ ನೀವು ಸುಳ್ಳು ಕೇಸು ಹಾಕಿದ್ದೀರಿ ಎಂದರೆ ಸರಿಯಲ್ಲ. ನೀವು ದಾವೆಯಲ್ಲಿ ಕೇಳಿದಂತಹ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.